ಶ್ರೀ ವಿ. ವೆಂಕಟಪ್ಪ.—ಎಲ್ಲಾ ತರಹೆಯವೂ ಇವೆ. ಸ್ಕೂಲು ಕಟ್ಟಡ, ಚಾವಡಿ, ದೇವಸ್ಥಾನ—ಎಲ್ಲವುಗಳಲ್ಲೂ ಇವೆ.

ಶ್ರೀ ಕುಂದೂರು ರುದ್ರಪ್ಪ.—ಹಾಲಿ ಸ್ಕೂಲು ಬಿಲ್ಡಿಂಗ್‌ಗಳಲ್ಲಿರುವುವು ಎಷ್ಟು, ದೇವಸ್ಥಾನ, ಚಾವಡಿಗಳಲ್ಲಿರುವುವು ಎಷ್ಟು ?

ಅಧ್ಯಕ್ಷರು.—ಅದನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ನಚಿವರು ಹೇಳಿದರು, ಕೆಲವು ಸ್ಕೂಲುಗಳು ದೇವಸ್ಥಾನ, ಚಾವಡಿಗಳಲ್ಲವೆಯೆಂದು. ಸ್ಕೂಲು ಬಹಳ ಅವಶ್ಯಕವಾಗಿರುವ ಕಡೆ ಜಾಗ್ರತೆ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಅದು ಇಲ್ಲಿ ಬರುವುದಿಲ್ಲ.

Construction of Vijayapur-Mallur Road.

Q.—1448. Sri S. R. RAMAIAH (Hosakote).—

Will the Government be pleased to state :—

(*a*) the period that has elapsed since the estimates for the construction of a road from Vijayapur, Devanahalli Taluk and Mallur were prepared ;

(*b*) the period required for the completion of the construction of the abovementioned road?

A.—Sri H. K. VEERANNA GOWDH (Minister for Public Works).—

(*a*) No estimates have yet been prepared.

(*b*) Cannot be said at present.

ಶ್ರೀ ಎಸ್. ಆರ್. ರಾಮಯ್ಯ.—(*a*) ಭಾಗಕ್ಕೆ ಉತ್ತರವಾಗಿ ಎಸ್ಟಿಮೇಟ್ ತಯಾರಾಗಿಲ್ಲವೆಂದು ಹೇಳಿದ್ದೀರಿ. 1957ನೆಯ ಅಕ್ಟೋಬರಿನ ಅಧಿವೇಶನದಲ್ಲಿ ಕೊಟ್ಟ ಒಂದು ಪ್ರಶ್ನೆಗೆ ಉತ್ತರವಾಗಿ 85,000 ರೂಪಾಯಿಗಳ ಎಸ್ಟಿಮೇಟ್ ತಯಾರಾಗಿವೆಯೆಂದು ಹೇಳಿದ್ದೀರಿ. ಇದಕ್ಕೇನು ನಮಜಾಯಿಷಿ ಹೇಳುತ್ತೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಹಳೆಯದು. ಈಗ ಬೇರೆ ಎಸ್ಟಿಮೇಟ್ ಮಾಡಿಸಬೇಕು.

ಶ್ರೀ ಎಸ್. ಆರ್. ರಾಮಯ್ಯ.—ಎಸ್ಟಿಮೇಟ್ ಆಗಿಯೇ ಇಲ್ಲವೆಂದು ಹೇಳಿದ್ದೀರಲ್ಲಾ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹೊಸದಾಗಿ ಮಾಡಿಲ್ಲ ; ಆಗ ಮಾಡಿದ್ದು up-to-date ಅಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಹಿಂದೆ ಜಾಗ್ರತೆ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡಲಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಭರವಸೆಯ ಮೇರೆ ಕೆಲಸ ನಡೆಯುವುದಿಲ್ಲ. Actual ಆಗಿ work ಆಗಬೇಕು. ನೀವೇನೋ ಕೇಳುತ್ತೀರಿ, 'ನೋಡೋಣ' ಎನ್ನುತ್ತೇವೆ. ಅದನ್ನೇ ಭರವಸೆಯೆಂದು ತಿಳಿದುಕೊಂಡರೆ ಏನು ಮಾಡುವುದು.

ಶ್ರೀ ಬಿ. ರಾಚಯ್ಯ.—ಈ ರಸ್ತೆ ಪಿ.ಡಬ್ಲ್ಯು.ಡಿ.ಗೆ ಸೇರಿದ್ದೇ, ಇಂಟರ್ ವಿಲೇಜ್ ಕಮ್ಯೂನಿಕೇಷನ್ನಿಗೆ ಸೇರಿದ್ದೇ ಅಥವಾ ಡಿಸ್ಟ್ರಿಕ್ಟ್ ಬೋರ್ಡ್‌ಗೆ ಸೇರಿದ್ದೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ರೋಡು.

ಶ್ರೀ ಬಿ. ರಾಚಯ್ಯ.—ಡಿಸ್ಟ್ರಿಕ್ಟ್ ಬೋರ್ಡು ರಸ್ತೆಯೆಂದರೆ, ಇದಕ್ಕಾಗಿ ಸ್ಪೆಷಲ್ ಗ್ರಾಂಟ್ ಏನಾದರೂ ಕೊಡುತ್ತಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ. - ಅವರು ಕೇಳಿಯೇ ಇಲ್ಲ. ಮಿನಿಸ್ಟರುಗಳು ಯಾರಾದರೂ ಅತ್ತಕಡೆ ಹೋದರೆ ಕೇಳುತ್ತಾರೆ ಅಷ್ಟೆ.

ಶ್ರೀ ಕುಂದೂರು ರುದ್ರಪ್ಪ.—ಇದು ಡಿಸ್ಟ್ರಿಕ್ಟ್ ಬೋರ್ಡ್ ರೋಡ್ ಎಂದಮೇಲೆ, P.W.D. ಮಂತ್ರಿಗಳೇಕೆ ಈ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಗಳಲ್ಲೂ ನಣ್ಣ ಕೆಲಸಗಳಲ್ಲದೆ, ದೊಡ್ಡ ಕೆಲಸಗಳಾದರೆ ಅವೂ P.W.D.ಗೇ ವಹಿಸಲ್ಪಡುತ್ತವೆ.

ಶ್ರೀ ಎಸ್. ಆರ್. ರಾಮಯ್ಯ.—ಈ ಪ್ರಶ್ನೆಗೆ ಉತ್ತರ ಕೊಡುತ್ತಿರುವ ರೀತಿಯನ್ನು ನೋಡಿದರೆ, ಈ ರಸ್ತೆ ನರ್ಕಾರದವರ ಗಮನಕ್ಕೇ ಬಂದಿಲ್ಲವೆಂದು ಕಾಣುತ್ತದೆಯಲ್ಲವೇ ?

ಅಧ್ಯಕ್ಷರು.—ನರ್ಕಾರದವರ ಗಮನಕ್ಕೆ ಬಂದಂತೆ ಕಾಣುವುದಿಲ್ಲ ಎಂದು ನೀವು ಹೇಳಬೇಕಾಗಿಲ್ಲ. ತಾವು ಪ್ರಶ್ನೆ ಕೇಳಿ.

ಶ್ರೀ ಎಸ್. ಆರ್. ರಾಮಯ್ಯ.—ಈ ವಿಚಾರದಲ್ಲಿ ಅನೇಕ ಪ್ರಾರ್ಥನೆಗಳೂ ಬಂದಿವೆ. ಅನೇಕವೇಳೆ accident ಗಳು ನಡೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಈ ಜಿಲ್ಲಾ ಬೋರ್ಡ್ ರಸ್ತೆಯನ್ನು ಕಾಪಾಡುವುದಕ್ಕೆ ನರ್ಕಾರದವರು ಗ್ರಾಂಟು ಕೊಡುತ್ತಾರೆಯೇ ಅಥವಾ ಇಲ್ಲವೇ ?

ಅಧ್ಯಕ್ಷರು.—ಅದು ಬಹಳ ನಾಮಾನ್ಯ ಪ್ರಶ್ನೆ.

Technical Schools proposed to be opened at Karwar, Belgaum, Dharwar and Bijapur Districts.

Q.—1602. Smt. LEELAVATHI MAGADI (Shirahatti).—

Will the Government be pleased to state :—

the number of technical schools proposed to be opened at Dharwar, Karwar, Bijapur and Belgaum districts ?

A.—Sri V. VENKATAPPA (Minister for Education). —

No new Technical High Schools are proposed to be opened during the current year.